ಹರಿಹರ ತಾಲ್ಲೂಕಿನ ಪ್ರಾಥಮಿಕ ಶಾಲೆಯಲ್ಲಿರುವ ಖಾಲಿ ಹುದ್ದೆಗಳು

೩೮೬. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಿಹರ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಉಪಾಧ್ಯಾಯರ ಸಂಖ್ಯೆ ಎಷ್ಟು ?

ಶ್ರೀ ಎಚ್. ಜಿ. ಗೋವಿಂದೇಗೌಡ (ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ೨೪.

ಶ್ರೀ ಬಿ. ಜಿ. ಕೊಟ್ರಪ್ಪ.—ಮಾನ್ಯ ಅಧ್ಯಕ್ಷರೇ, ಕೇವಲ ೨೪ ಜನ ಉಪಾಧ್ಯಾಯರನ್ನು ಭರ್ತಿ ಮಾಡತಕ್ಕಂಥ ವಿಷಯವನ್ನು ಮಾನ್ಯ ವಿದ್ಯಾಮಂತ್ರಿಗಳು ಹೇಳಿದ್ದಾರೆ. ನಾನು ಈ ತಾಲ್ಲೂಕಿನಲ್ಲಿ ಹುಡುಗರ ಸಂಖ್ಯೆ ಜಾಸ್ತಿ ಇದೆ, ಉಪಾಧ್ಯಾಯರ ಸಂಖ್ಯೆ ಕಡಿಮೆ ಇದೆ ಎಂಬ ವಿಚಾರದ ಬಗ್ಗೆ ಹಾಗೂ ಉಪಾಧ್ಯಾಯರು ಬೇಕು ಎಂದು ಹೇಳಿ ಕಳಿಸಿದ್ದರೂ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದು ಗೊತ್ತಾಗಲಿಲ್ಲ. ಪರೀಕ್ಷೆ ಕಾಲ ಹತ್ತಿರ ಬರುತ್ತಾ ಇದೆ. ಉಪಾಧ್ಯಾಯರನ್ನು ಇನ್ನೂ ಭರ್ತಿ ಮಾಡಿಲ್ಲ. ಪಾಠಪ್ರವಚನಗಳು ಸರಿಯಾಗಿ ನಡೆದಿಲ್ಲ, ಆದುದರಿಂದ ಈ ವಿಚಾರದಲ್ಲಿ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಅಧ್ಯಕ್ಷರೇ, ಬಹುಶಃ ಈ ವರ್ಷ ಪಠ್ಯಪುಸ್ತಕಗಳನ್ನೂ, ಸಮವಸ್ತ್ರಗಳನ್ನೂ ಫ್ರೀಯಾಗಿ ಕೊಟ್ಟಿದ್ದರಿಂದ, ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೂ ಬಂದಿದೆ, ಇಲಾಖೆಯ ಗಮನಕ್ಕೂ ಬಂದಿದೆ. ೧೯೮೬-೮೭ನೇ ಸಾಲಿನಲ್ಲಿ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಬೇಕೆಂಬ ಬಗ್ಗೆ ಸರ್ಕಾರದಲ್ಲಿ ವ್ಯವಹಾರ ನಡೆದಿದೆ. ಆದಷ್ಟು ಬೇಗ ಈ ಕೆಲಸ ಮಾಡುತ್ತೇವೆ.

ಕಾಪು ಕ್ಷೇತ್ರಕ್ಕೆ ಪಾಲಿಟೆಕ್ನಿಕ್ ಮಂಜೂರು ಮಾಡುವುದು

೪೦೨. ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಕಾಪು ಕ್ಷೇತ್ರಕ್ಕೆ ಒಂದು ಪಾಲಿಟೆಕ್ನಿಕ್ ಮಂಜೂರು ಮಾಡುವಂತೆ ಕೇಳಿಕೊಂಡಿರುವ, ಸಂಬಂಧಪಟ್ಟ ಇಲಾಖೆಯವರು ಮಂಜೂರು ಮಾಡದಿರಲು ಕಾರಣವೇನು, ಹಾಗೂ ಅದನ್ನು ಯಾವಾಗ ಮಂಜೂರು ಮಾಡಲಾಗುವುದು.

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

(ಅ) ಸದ್ಯದಲ್ಲಿ ಸರ್ಕಾರಿ ವಲಯದಲ್ಲಿ ಯಾವುದೇ ಪಾಲಿಟೆಕ್ನಿಕ್ ತೆರೆಯುವ ವಿಚಾರ ಸರ್ಕಾರಕ್ಕೆ ಇಲ್ಲ

ಶ್ರೀ ಬಿ. ಜಿ. ಕೊಟ್ರಪ್ಪ (ಮಾನ್ಯ ವಸಂತ ಸಾಲಿಯಾನ ಪರವಾಗಿ).—ಮಾನ್ಯ ಅಧ್ಯಕ್ಷರೇ, ನವ್ಮ ಕ್ಷೇತ್ರ ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಅಲ್ಲಿ ಹಲವಾರು ಸೀಯರ್ ಕಾಲೇಜು ಮತ್ತು ಕಾಲೇಜುಗಳು ಇರುವುದರಿಂದ ಅಲ್ಲಿ ಒಂದು ಖಾಸಗೀ ಸಂಸ್ಥೆಯವರು ಒಂದು ಪಾಲಿಟೆಕ್ನಿಕ್ ಅನ್ನು ತೆರೆಯುವುದಕ್ಕೆ ಮುಂದೆ ಬಂದಿದ್ದಾರೆ. ಅವರಿಗೆ ಆದಷ್ಟು ಬೇಗ ಅನುಮತಿಯನ್ನು ಸರ್ಕಾರದವರು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ನಿಯಮಾವಳಿ ಪ್ರಕಾರ ಅವರು ಅಪ್ಲಿಕೇಷನ್ ಹಾಕಕೊಂಡು, ಆ ಅಪ್ಲಿಕೇಷನ್ ಸರಿಯಾಗಿ ಇದೆ ಎನ್ನುವುದಾದರೆ ಅದಕ್ಕೆ ಅಡ್ಡಿ ಬರುವುದಿಲ್ಲ. ನಿಯಮಾವಳಿ ಪ್ರಕಾರ ಸರಿಯಾಗಿ ಇದ್ದರೆ ಕೊಡುತ್ತೇನೆ.